**<u>ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್ ಸಿ, ಹುಬ್ಬಳ್ಳಿ.</u>**

**MVC 739-24 RW-1**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 23.01.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಎದುರುದಾರ ಪರ ಶ್ರೀ A S S, ವಕೀಲರಿಂದಃ**

**ನಾನು ಈ ಕೆಳಕಂಡ ದಾಖಲೆಗಳನ್ನು ಹಾಜರಪಡಿಸಿದ್ದೇನೆ.**

ನನಗೆ ಸಾಕ್ಷ್ಯನುಡಿಯಲು ಕೊಟ್ಟ ಅಧಿಕಾರ ಪತ್ರವನ್ನು ನಿಆರ್ - 2 ಎಂದು, ಪಾಲಿಸಿ ಪ್ರತಿಯನ್ನು ನಿಆರ್ - 3 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಅರ್ಜಿದಾರ ಪರ ಶ್ರೀಮತಿ P R B, ವಕೀಲರಿಂದಃ**

ನಾನೇ ಮುಖ್ಯ ವಿಚಾರಣೆಗೆ ಮಾಹಿತಿ ನೀಡಿದ್ದೇನೆ. ದಾಖಲೆ ಆಧಾರದ ಮೇಲೆ ಸಾಕ್ಷಿ ನುಡಿಯುತ್ತಿದ್ದೇನೆ. ದೋಷಾರೋಪಣಾ ಪಟ್ಟಿ ನಮ್ಮ ವಿಮೆ ವಾಹನದ ಮೇಲೆ ಇದೆ ಅಂದರೆ, ತಪ್ಪಾಗಿ ಹಾಕಿದ್ದಾರೆಂದು ಹೇಳುತ್ತಾರೆ. ದೋಷಾರೋಪಣಾ ಪಟ್ಟಿ ನಾವು ಪ್ರಶ್ನೆ ಮಾಡಿಲ್ಲ. ನಮ್ಮ ವಾಹನದಿಂದ ಅಪಘಾತ ವಾಗಿದ್ದರಿಂದ ಪ್ರಶ್ನೆ ಮಾಡಿಲ್ಲ ಅಂದರೆ ಸರಿಯಲ್ಲ. ದೂರು ಹಾಗೂ ಪ್ರಥಮ ವರ್ತಮಾನ ವರದಿಯಲ್ಲಿ ಅಪಘಾತ ಪಡಿಸಿ ಓಡಿಹೋಗಿದ್ದಾರೆಂದು ಪ್ರಕರಣ ದಾಖಲ್ ಆಗಿದೆ ಅಂದರೆ ಸರಿ. ಅಪಘಾತ ಕ್ಕೊಳಗಾದ ವ್ಯಕ್ತಿ ಓಡಿಹೋದ ವಾಹನವನ್ನು ಹಿಡಿಯಲು ಆಗುವುದಿಲ್ಲ ಅಂದರೆ ಸರಿಯಲ್ಲ. ದೂರಿನಲ್ಲಿ ಹೊಡೆದು ಹೋಗಿದ್ದಾರೆಂದು ಹೇಳಿದ್ದಾರೆ ಅಂದರೆ, ತಪ್ಪಾಗಿ ಹೇಳಿದ್ದಾರೆ ಎಂದು ಹೇಳುತ್ತಾರೆ. ತಪ್ಪಾಗಿ ದೂರು ನೀಡಿದ್ದಾರೆಂದು ಚಾಲಕ ಹಾಗೂ ಮಾಲಿಕ ಹೇಳಬಹುದು ಅಂದರೆ ಸರಿಯಲ್ಲ. ಐ ಪಿ ಸಿ 279, 338, 304 ಎ ಹಾಗೂ 134, 187 ಐ ಎಂ ವಿ ಕಾಯ್ದೆ ನಮ್ಮ ವಾಹನದ ಮೇಲೆ ಇದೆ ಅಂದರೆ ಸರಿ. ನಮ್ಮ ವಿಮೆ ಕಂಪನಿಯ ಚಾಲಕ ಹಾಗೂ ಮಾಲಿಕನಿಗೆ ನೋಟಿಸು ನೀಡಿ ತಪ್ಪು ಯಾರದು ಇದೆ ಅಂತಾ ತಿಳಿದುಕೊಂಡಿಲ್ಲ. ನಮ್ಮ ವಾಹನದಿಂದ ಅಪಘಾತ ವಾಗಿದ್ದರಿಂದ ನಾವು ತಿಳಿದುಕೊಳ್ಳಲು ಹೋಗಿಲ್ಲ ಅಂದರೆ ಸರಿಯಲ್ಲ. 3 ನೇ ವ್ಯಕ್ತಿಯಾಗಿ ಪರಿಹಾರ ಕೇಳುತ್ತಿದ್ದಾರೆ ಅಂದರೆ ಸರಿ. Contributory negligence ಬರುವುದಿಲ್ಲ ಅಂದರೆ ಸರಿಯಲ್ಲ. ಮೃತ ವ್ಯಕ್ತಿಯ ತಪ್ಪು ಇಲ್ಲ ಅಂದರೆ ಸರಿಯಲ್ಲ. ನಾವು ಪರಿಹಾರ ಕೊಡಲು ಬಾಧ್ಯಸ್ಥರು ಅಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.